1	2	3	4
30.	B'lore City Corpn	50.00	0.00
31.	Director Agrl. Dept.	15.00	0.00
32.	Int. Subsidy Apex Bank	3300.00	0.00
	Total	**19231.00**	**10640.28**

ಸಹಕಾರ ಸಂಘಗಳ ಪದಾಧಿಕಾರಿಗಳ ಮೇಲೆ ಪೂಲೀಸ್ ಕೇಸ್

2569 (3179) : ಶ್ರೀ ಖಾದ್ರಿ ಎಸ್.ಎಸ್. (ಶಿಗ್ಗಾಂವ್) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಹಕಾರಿ ಸಂಘದ ನಿರ್ದೇಶಕರ ಮೇಲೆ ಸಂಘದ ಸದಸ್ಯನಲ್ಲದ ಒಬ್ಬ ವ್ಯಕ್ತಿ ಸಹಕಾರ ಇಲಾಖೆಯ ಪೂರ್ವಾನುಮತಿ ಇಲ್ಲದ ಪೂಲೀಸ್ ಕೇಸ್ ಮಾಡಲು ಬರುತ್ತದೆಯೇ;

ಆ) ಸಹಕಾರ ಸಂಘಗಳ ಇಲಾಖೆಯ ಪೂರ್ವಾನುಮತಿ ಇಲ್ಲದೆ ಸಹಕಾರ ಸಂಘಗಳ ಪದಾಧಿಕಾರಿಗಳ ಮೇಲೆ ಅನೇಕ ಪೊಲೀಸ್ ಕೇಸ್ ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದರೆ, ಇಂತಹ ಪ್ರಕರಣಗಳ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು): ಅ) ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಾಲಂ 111 ಅಡಿಯಲ್ಲಿ ಲೆಕ್ಕ ಪರೊಶೋಧನೆಯಿಂದ ಉದ್ಭವಿಸುವ ವಿಷಯಗಳ ಬಗ್ಗೆ ಅಪರಾದಿ ವೆಸಗಿದರೆ, ಸಹಕಾರ ಸಂಘದ ನಿರ್ದೇಶಕರ, ಮೇಲೆ ಚೀಫ್ ಆಡಿಟರ್ ರವರ ಪೂರ್ವ ಮಂಜೂರಾತಿ ಇಲ್ಲದ ಮೊಕದ್ದಮೆ ಹೂಡಲು ಬರುವುದಿಲ್ಲ. ಅದೇ ರೀತಿ, ಸದರಿ ಕಾಯಿದೆ ಪ್ರಕಾರವಾಗಿ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ಅಪರಾಧ ವೆಸಗಿದಲ್ಲಿ, ಕರ್ನಾಟಕ ಸಹಕಾರ ಸಂಘಗಳ ರಜಿಸ್ಟ್ರಾರ್ ಅವರ ಪೂರ್ವ ಮಂಜೂರಾತಿ ಇಲ್ಲದೆ ಮೊಕದ್ದಮೆ ಹೂಡಲು ಬರುವುದಿಲ್ಲ. ಆದರೆ, ಭಾರತ ದಂಡ ಸಂಹಿತೆ ಕಲಂಗಳಡಿಯಲ್ಲಿ ಯಾವುದೇ ಸಂಜ್ಞೇಯ (Cognizable) ಅಪರಾಧವೆಸಗಿದಲ್ಲಿ, ಮೊಕದ್ದಮೆ ಹೂಡಲು ಯಾವುದೇ ಪೂರ್ವಾನುಮತಿಯ ಅವಶ್ಯಕತೆ ಇರುವುದಿಲ್ಲ.

ಆ) ಪಿಎಸ್ಐ ಹುದ್ದೆಯ ಕೆಳ ದರ್ಜೆಯ ಎಲ್ಲಾ ಪೊಲೀಸ್ ಸಿಬ್ಬಂದಿಯವರಿಗೆ ಉಚಿತವಾಗಿ ಪಡಿತರ ಆಹಾರ ದಾನ್ಯಗಳಾದ ಅಕ್ಕಿ ಮತ್ತು ಗೋದಿಯನ್ನು ಸಿಬ್ಬಂದಿಯವರಿಗೆ ವಿತರಿಸದೆ ದುರುಪಯೋಗ ಪಡಿಸಿಕೊಂಡಿರುವ ಪ್ರಕರಣ ದಾಖಲಾಗಿದೆ.

ಇ) ಈ ಪ್ರಕರಣ ತನಿಖೆಯಲ್ಲಿರುತ್ತದೆ. ತನಿಖೆಯಲ್ಲಿ ಅಪರಾಧ ಖಚಿತ ಪಟ್ಟಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಮತ್ತು/ಅಥವಾ ಕಲಂ 197 ದಂಡಪ್ರಕ್ರಿಯ ಸಂಹಿತೆ ಪ್ರಕಾರ ಮುಂದಿನ ಕ್ರಮತೆಗೆದುಕೊಳ್ಳುವುದರ ಬಗ್ಗೆ ತೀರ್ಮಾನಿಸಲಾಗುವುದು.

ಕುಂದಾಪುರ ಅಸೋಡು ಜಾತ್ರೆಯಲ್ಲಿ ಸೂಜಿ ಚುಚ್ಚಿದ ಪ್ರಕರಣದ ಬಗ್ಗೆ

2577 (3120) : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕುಂದಾಪುರದಲ್ಲಿ ಅಸೋಡು ಜಾತ್ರೆಯ ಸಮಯದಲ್ಲಿ ಸೂಜಿ ಚುಚ್ಚಿದ ಪ್ರಕರಣದಲ್ಲಿ ಅಮಾಯಕರ ಮೇಲೆ ಉದ್ದೇಶಪೂರ್ವಕವಾಗಿ ಸೂಳ್ಳು ಮೂಖದ್ದಮೆಗಳನ್ನು ದಾಖಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಅಮಾಯಕರ ವಿರುದ್ಧ ರಾಜಕೀಯ ಸೇಡು ತೀರಿಸಿಕೊಳ್ಳಲು ಸರ್ಕಾರ ಉದ್ದೇಶಿಸಿದೆಯೆ;

ಇ) ಎಷ್ಟು ಮಂದಿಯ ಮೇಲೆ ಕೇಸು ದಾಖಲಿಸಲಾಗಿದೆ;

ಈ) ನಿಜವಾದ ಅಮಾಯಕರನ್ನು ಗುರುತಿಸಿ ಅವರ ಮೇಲೆ ಹಾಕಿದ ಕೇಸನ್ನು ವಾಪಸು ಪಡೆಯಲಾಗುವುದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಕುಂದಾಪುರ ವೃತ್ತದ ಸರಹದ್ದಿನಲ್ಲಿ 4 ಜನರ ಮೇಲೆ ಮೊಕದ್ದಮ್ಮೆ ದಾಖಲಿಸಲಾಗಿದೆ.

ಈ) ಅಪರಾಧಿಗಳು ಅಮಾಯಕರೆಂದು ಕರಡು ಬಂದಲ್ಲಿ, ಇಂಥಹವರ ವಿರುದ್ಧ ದಾಖಲಾಗಿರುವ ಮೊಕ್ಕದ್ದಮೆಗಳನ್ನು ಹಿಂತೆಗೆದುಕೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಮುಂಡರಗಿ ತಾಲ್ಲೂಕಿನಲ್ಲಿ ಅಧಿಕಾರಿಗಳನ್ನು ಬೆದರಿಸಿ ಹಣ ವಸೂಲಿ

2624 (3207) : ಶ್ರೀ ಪಾಟೀಲ್ ಸಿದ್ಧಲಿಂಗನಗೌಡ ಸಿದ್ದನಗೌಡ (ಮುಂಡರಗಿ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮುಂಡರಗಿ ತಾಲ್ಲೂಕಿನಲ್ಲಿ ವಿಧಾನಸಭೆಯ ಚುನಾವಣೆಗೆ ಸ್ಪರ್ಧಿಸಿ ಸೋತ ಅಭ್ಯರ್ಥಿಗಳಲ್ಲಿ ಕೆಲವರು ಅಧಿಕಾರಿಗಳನ್ನು ಬೆದರಿಸಿ ಹಣ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಾರದಿದ್ದರೆ, ಸಿ.ಬಿ.ಐ. ತನಿಖೆ ಮಾಡಿಸಿ ಕ್ರಮ ಕೈಗೊಳ್ಳಲಾಗುತ್ತದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ನಕಲಿ ಛಾಪಾ ಕಾಗದ ಪ್ರಕರಣ

2639 (3006) : ಶ್ರೀ ರವೀಂದ್ರನಾಥ ಎಸ್.ಎ. (ಮಾಯಕೊಂಡ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಕಲಿ ಛಾಪಾ ಕಾಗದ ಹಗರಣ ತನಿಖೆಯು ವಿಳಂಬವಾಗುತ್ತಿರಲು ಕಾರಣಗಳೇನು;

ಆ) ಇದರ ವಿಚಾರಣೆಗೆ ಯಾರನ್ನು ನೇಮಕ ಮಾಡಲಾಗಿದೆ; ತನಿಖೆ ಯಾವ ಹಣತದಲ್ಲಿದೆ;

ಇ) ಈ ತನಿಖೆ ಕಾರ್ಯ ಕೈಗೊಳ್ಳಲು ಸಿಬ್ಬಂದಿಗಳ ಕೊರತೆ, ಅಗತ್ಯ ಸಲಕರಣೆಗಳ ಅಭಾವ ಕಾರಣವೇ;

ಈ) ತನಿಖೆ ಕಾರ್ಯಕ್ಕೆ ಯಾವಾಗ ವಿಚಾರಣಾಧಿಕಾರಿಯನ್ನು (ನ್ಯಾಯಾದೀಶರು) ನೇಮಿಸಲಾಗುವುದು;

ಉ) ಇದರಿಂದ ವಿಚಾರಣೆಗೆ ಹಿನ್ನೆಡೆ ಉಂಟಾಗಿ ಇದು ಆರೋಪಿಗಳಿಗೆ ಪರವಲ್ಲವೇ;

ಊ) ತನಿಖೆ ಕಾರ್ಯವನ್ನು ಯಾವಾಗ ಕೈಗೆತ್ತಿಕೊಂಡು ವಿಚಾರಣೆ ಪೂರ್ಣ ಗೊಳಿಸಲಾಗುತ್ತದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

ಅ) ತನಿಖೆಯಲ್ಲಿ ವಿಳಂಬವಾಗಿರುವುದಿಲ್ಲ.

ಆ) ಈ ಪ್ರಕರಣಗಳ ತನಿಖೆಗಾಗಿ ಶ್ರೀ ಆರ್. ಶ್ರೀಕುಮಾರ್, ಅವರ ಪೊಲೀಸ್